

# ಕಸ್ತೂರ್‌ಬಾ v/s ಗಾಂಧಿ

■ ಬರಗೂರು ರಾಮಚಂದ್ರಪ್ಪ
ಕಲೆ: ಮನೋಹರ ಕೆ. ಆಚಾರ್ಯ

## ಬಾಪೂ ಬಾಬಾಸಾಹೇಬರ ಮುಖಾಮುಖಿ

ದಂಡಿ ಸತ್ಯಾಗ್ರಹವು ಒಂದು ಐತಿಹಾಸಿಕ ಘಟನೆ. ಬ್ರಿಟಿಷ್ ಆಡಳಿತವು ಸಹಜೋತ್ಪಾದನೆಯ ಉಪ್ಪಿನ ಮೇಲೆ ತೆರಿಗೆ ಹಾಕಿದ್ದನ್ನು ವಿರೋಧಿಸಿ ಗಾಂಧಿ, ದಂಡಿಯವರೆಗೆ ಪಾದಯಾತ್ರೆ ಪ್ರಾರಂಭಿಸಿದರು. ದಂಡಿ ಇದ್ದದ್ದು ಇನ್ನೂರ ನಲವತ್ತು ಮೈಲಿ ದೂರದಲ್ಲಿ, ಸಮುದ್ರದ ದಂಡೆಯಲ್ಲಿ. ಗಾಂಧಿ ಪಾದಯಾತ್ರೆ ಹೊರಟಾಗ, ಊರೂರಲ್ಲಿ ಜನರು ಸ್ವಯಂಪ್ರೇರಿತರಾಗಿ ಸೇರಿಕೊಂಡರು. ಅದೊಂದು ಅಭೂತಪೂರ್ವ ಪಾದಯಾತ್ರೆ. 'ಗಾಂಧಿ ಜನಯಾತ್ರೆ'ಯು ದಂಡಿ ತಲುಪಿದಾಗ ಎಲ್ಲರೆದುರು ಗಾಂಧಿ ಹಿಡಿ ಉಪ್ಪನ್ನು ಎತ್ತಿ ಹಿಡಿದು ಪ್ರತಿಭಟಿಸಿದರು. ಜನರು ಘೋಷಣೆ ಕೂಗಿ ಬ್ರಿಟಿಷರ ನಿಲುವನ್ನು ವಿರೋಧಿಸಿದರು.

ಬ್ರಿಟಿಷ್ ಆಡಳಿತ, ಗಾಂಧಿಯವರನ್ನು ಬಂಧಿಸಿತು. ಸ್ವಲ್ಪ ಕಾಲಾನಂತರ ಬಿಡುಗಡೆ ಮಾಡಿತು. ಆದರೆ ಸಬರಮತಿ ಆಶ್ರಮದ ಮುಟ್ಟುಗೋಲಿಗೆ ಮುಂದಾಯಿತು. ಗಾಂಧಿ ಪ್ರಬಲವಾಗಿ ವಿರೋಧಿಸಿದರು. 'ಮುಟ್ಟುಗೋಲು ಮಾಡಿಕೊಳ್ಳಕೂಡದು. ಅದರ ಬದಲು ನಾನೇ ಮುಫತ್ತಾಗಿ ಆಶ್ರಮವನ್ನು ಬರೆದುಕೊಡ್ತೇನೆ. ನೀವೇ ನಡೆಸಿ' ಎಂದು ವೈಸ್‌ರಾಯ್‌ಗೆ ಹೇಳಿದರು. ವೈಸರಾಯ್ ಮೌನವಹಿಸಿದರು. ಗಾಂಧಿ ಮುಂದಿನ ಅಪಾಯಗಳನ್ನು ನಿರೀಕ್ಷಿಸಿ ಸಬರಮತಿ ಆಶ್ರಮವನ್ನು ಬಿಡಲು ನಿರ್ಧರಿಸಿದರು. ಗಾಂಧಿ ಅನುಯಾಯಿ ಮೀರಾಬೆನ್ ನೋಡಿದ ಸ್ಥಳದಲ್ಲಿ ಹೊಸ ಆಶ್ರಮ ತಲೆಯೆತ್ತಿತ್ತು. ಅದೇ ವಾರ್ಧಾ ಆಶ್ರಮ.

ವಾರ್ಧಾ ಆಶ್ರಮದ ಹೊಸ ವಾತಾವರಣಕ್ಕೆ ಕಸ್ತೂರ್‌ಬಾ ಹೊಂದಿಕೊಳ್ಳತೊಡಗಿದ್ದರು. ಜೊತೆಗೆ ಮಹದೇವ ದೇಸಾಯಿ, ದುರ್ಗಾ, ದೇವದಾಸ್ ಇದ್ದರು. ಆದರೆ ಮಗನ್‌ಲಾಲ್ ಮರಣ ಹೊಂದಿದ್ದ. ಆಶ್ರಮದ ಮೇಲುಸ್ತುವಾರಿ ನೋಡಿಕೊಳ್ಳುತ್ತಿದ್ದ ಮಗನ್‌ಲಾಲ್, ಕಸ್ತೂರ್‌ಬಾಗೆ ಮಗನಂತೆಯೇ ಇದ್ದ. ಆತನ ಮರಣ ಕಸ್ತೂರ್‌ಬಾಗೆ ತುಂಬಾ ನೋವು ತಂದಿತ್ತು. ಆದರೆ ಮುಂದೆ ಸಾಗಲೇಬೇಕಿತ್ತು. ಗಾಂಧಿಮಾರ್ಗ ಸದಾ ವಿಸ್ತಾರವಾಗುತ್ತಿತ್ತು.

ಒಂದು ದಿನ ಮಹದೇವ ದೇಸಾಯಿ ಕಸ್ತೂರ್‌ಬಾಗೆ 'ಇವತ್ತು ವಿಶೇಷವಾದ ದಿನ ತಾಯಿ' ಎಂದರು. ಕಸ್ತೂರ್‌ಬಾ ಯಾಕೆಂದು ಅರ್ಥವಾಗದೆ ನೋಡಿದರು. 'ಇವತ್ತು ಆಶ್ರಮಕ್ಕೆ ಡಾ. ಅಂಬೇಡ್ಕರ್ ಬರ್‍ತಾರೆ.'

ಕಸ್ತೂರ್‌ಬಾ ಅಚ್ಚರಿಯಿಂದ ಕಣ್ಣರಳಿಸಿದರು.

'ನಿಜ ಹೇಳಿ ಮಹದೇವ' ಎಂದರು.

'ಗಾಂಧಿ ಆಶ್ರಮದಲ್ಲಿ ನೆಲೆಸಿರೋದು 'ನಿಜ' ಅನ್ನೋ ಮೌಲ್ಯ ಅಲ್ವ? ನಾನ್ಯಾಕೆ ಸುಳ್ ಹೇಳಲಿ?'

'ಸುಳ್ ಹೇಳ್ತೀಯ ಅಂತ ಅಲ್ಲ. ತಮಾಷೆ ಮಾಡ್ತಿದ್ದಿಯೇನೊ ಅಂತ ಹಾಗಂದೆ.'

'ಛೇ! ಛೇ! ಅಂಬೇಡ್ಕರ್ ಅವರ ವಿಷಯದಲ್ಲಿ ತಮಾಷೆ ಮಾಡೋದುಂಟ? ತಮಾಷೆ ಮಾಡಿದ್ರೆ, ಗಾಂಧಿ ನನ್ನನ್ನ ಸುಮ್ನೆ ಬಿಡೋದುಂಟ?'

'ಅದೂ ಸರೀನೇ. ನನಗ್ಯಾಕೆ ಆಶ್ಚರ್ಯ ಅಂದ್ರೆ ಯಾವ್ಯಾವುದೋ ವಿಷಯದಲ್ಲಿ ಬಾಪೂಗೂ ಅಂಬೇಡ್ಕರ್ ಡಾಕ್ಟ್ರು ಸಾಹೇಬ್ರಿಗೂ ಆಗ್‌ಬರಲ್ಲ ಅಲ್ವ? ಏನೇನೋ ಚರ್ಚೆ ಆಗ್ತಿತ್ತಲ್ವ? ಅದಕ್ಕೆ ಹಾಗ್ ಕೇಳ್ದೆ.'

'ನಿಜವಾಗಲೂ ಬರ್‍ತಿದ್ದಾರೆ. ಅನುಮಾನವೇ ಇಲ್ಲ.'

'ದೊಡ್ಡವರ ನಡೆ ಅಂದ್ರೆ ಹೀಗಿರುತ್ತೆ ಅಲ್ವ ಮಹದೇವ? ಜಗಳ ಇದ್ರೂ ಅವ್ರೇ ಬರ್‍ತಾರೆ ಅಂದ್ರೆ ಡಾಕ್ಟ್ರು ಸಾಹೇಬ್ರು ಎಷ್ಟು ಒಳ್ಳೆಯವರು ಅಲ್ವ?'

'ಚಿಂತನಶೀಲರು ಇರೋದೇ ಹೀಗೆ ತಾಯಿ. ಇಬ್ಬರೂ ಚಿಂತನಶೀಲರು. ಇವತ್ತು ಒಳ್ಳೇ ದಿನ. ಅವ್ರ್ ಬಂದಾಗ ನಾನೂ ಅಲ್ಲೇ ಇರ್‍ತೀನಿ, ಬಾಪು ಒಪ್ಪಿದ್ರೆ' ಎಂದರು ಕಸ್ತೂರ್‌ಬಾ.

'ಒಪ್ಪದೇ ಏನು? ನೀವು ಬನ್ನಿ' ಎಂದು ಹೇಳಿ ಮಹದೇವ ದೇಸಾಯಿ ಹೊರಟರು.

ಕಸ್ತೂರ್‌ಬಾ ಆಗಲೇ ಹೋಗಿ ಗಾಂಧಿಯವರ ಜೊತೆ ಸೇರಿದರು.

ವಾರ್ಧಾ ಆಶ್ರಮದ ಆವರಣದಲ್ಲಿ ಗಾಂಧಿ ಕೂತಿದ್ದರು. ಮರಗಿಡಗಳು, ಕಲ್ಲು ಬೆಂಚುಗಳು ಇದ್ದ ಆವರಣ. ಗಾಳಿ ಬೀಸುತ್ತಿತ್ತು. ಮರಗಿಡಗಳು ಅಲುಗಾಡುತ್ತಿದ್ದವು. ಒಣಗಿದ ಎಲೆಗಳು ಉದುರುತ್ತಿದ್ದವು. ಹಸಿರು ಎಲೆಗಳು ಅತ್ತಿತ್ತ